# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 152 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 16-02-2022. |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ "ಭಾರತ ಮಾಲಾ" ಕಾರ್ಯಕ್ರಮದ ಅಡಿ ಬೆಂಗಳೂರು ನಗರ ಸುತ್ತಲು ವರ್ತುಲ ರಸ್ತೆ ಅಂದರೆ, ಸೆಟ್‌ಲೈಟ್ ಟೌನ್ ರಿಂಗ್ ರಸ್ತೆ ನಿರ್ಮಿಸುವ ಯೋಜನೆಯನ್ನು ಕೈಗೊಂಡಿದೆಯೇ; ಹಾಗಿದ್ದಲ್ಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಯಾವ ಅನುಪಾತದಲ್ಲಿ ವೆಚ್ಚವನ್ನು ಭರಿಸಲು ಒಪ್ಪಿ ಈ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ; (ಈ ಯೋಜನೆಯ ವ್ಯಾಪ್ತಿಗೆ ಸೇರುವ ಪಟ್ಟಣಗಳು ಒಳಗೊಂಡಂತೆ ಈ ಯೋಜನೆಯ ಪೂರ್ಣ ಮಾಹಿತಿ ನೀಡುವುದು); | ಬೆಂಗಳೂರು ರಿಂಗ್ ರೋಡ್ (STRR) (ಪಶ್ಚಿಮ ಭಾಗ)) – ರಾಹೆ-948ಎ ಭಾಗವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯದಲ್ಲಿ ಕಿ.ಮೀ.0.00 ರಿಂದ 179.969 ರವರೆಗೆ 6 ಪ್ಯಾಕೇಜ್‌ಗಳ ಅಡಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿದ್ದು, ವಿವರಗಳು ಕೆಳಕಂಡಂತಿವೆ.<br>ಎ) ಬೆಂಗಳೂರು ರಿಂಗ್ ರಸ್ತೆ (STRR)-NH-948A- Package-1 ರ ಹಂತ-1 ಡಾಬಸ್‌ಪೇಟೆಯಿಂದ ಮಾಗಡಿವರೆಗೆ ಕಿ.ಮೀ 0.00 ರಿಂದ 46.300- DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ. 3D ಪ್ರಗತಿಯಲ್ಲಿದೆ.<br>ಬಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-1 ಪ್ಯಾಕೇಜ್-2 ಮಾಗಡಿಯಿಂದ ರಾಮನಗರವರೆಗೆ ಕಿ.ಮೀ 46.300 ರಿಂದ 79.00-DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ.<br>ಸಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-2 ರ ಪ್ಯಾಕೇಜ್-1 ರಾಮನಗರದಿಂದ Bannerghatta National Park ಕಿ.ಮೀ 79.00 ರಿಂದ 112.600 ವರೆಗೆ – DPR ಪ್ರಗತಿಯಲ್ಲಿದೆ LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ.<br>ಡಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A- ಹಂತ-2 ರ ಪ್ಯಾಕೇಜ್-2 BNP ಯ ಸಂಪೂರ್ಣ ಕೋರ್ ಪ್ರದೇಶದಲ್ಲಿ BNP ಎತ್ತರಿಸಿದ ಹೆದ್ದಾರಿಯ ಮತ್ತು ESZ (Echo Sensitive Zone) ಪಕ್ಕದ ಪ್ರದೇಶದಲ್ಲಿ @ 1 ಕಿ.ಮೀ ಎರಡೂ ಬದಿಗಳಲ್ಲಿ ಅಪ್ರೋಚ್ ರಸ್ತೆಗಳು ಒಳಗೊಂಡಂತೆ ಕಿ.ಮೀ.112.600 ರಿಂದ 120.700-DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ ಮತ್ತು<br>ಇ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-2ರ ಪ್ಯಾಕೇಜ್-3 BNP ನಿಂದ ಬೆಳಗೊಂದಪಲ್ಲಿ (TN) ಗೆ ಕಿ.ಮೀ 120.700 ರಿಂದ 144.480 ವರೆಗೆ – DPR ಪ್ರಗತಿಯಲ್ಲಿದೆ. LA ಸ್ಥಿತಿ:3A 100% ಪೂರ್ಣಗೊಂಡಿದೆ. ಕರ್ನಾಟಕ ವಿಭಾಗದಲ್ಲಿ 3D ಪ್ರಗತಿಯಲ್ಲಿದೆ. ಮತ್ತು ತಮಿಳುನಾಡು ವಿಭಾಗದಲ್ಲಿ 3D ಪೂರ್ಣಗೊಂಡಿದೆ.<br>ಎಫ್) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-3ರ ಪ್ಯಾಕೇಜ್-1 ಬೆಳಗೊಂದಪಲ್ಲಿ (TN) ನಿಂದ TN/KNT ಗಡಿ ಕಿ.ಮೀ 144.480 ರಿಂದ 179.969-3A ಮತ್ತು 3D 100% ವರೆಗೆ ಪೂರ್ಣಗೊಂಡಿದೆ. ಮಾರ್ಚ್-2022 ರೊಳಗೆ ಅವಾರ್ಡ್ ಸಾಧ್ಯತೆ ಇರುತ್ತದೆ.<br>ದಿನಾಂಕ: 08.09.2021 ರಂದು ಗೌರವಾನ್ವಿತ ಕೇಂದ್ರ ಸಚಿವರು (RT&H) ಮತ್ತು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ |

| | | |
|---|---|---|
| | | ನಡುವೆ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಟೋಲ್ ಆದಾಯದ ಹಂಚಿಕೆಯ ಮೂಲಕ NHAI ನಿಂದ ಯಾವುದೇ ಮರುಪಾವತಿ ಪಡೆಯದೇ 30% ಭೂಸ್ವಾಧೀನ ವೆಚ್ಚವನ್ನು ಭರಿಸಲು ಹಾಗೂ ರಾಜ್ಯ ಸರ್ಕಾರವು ಖನಿಜಗಳ (ಮರಳು, ಜೆಲ್ಲಿ ಇತ್ಯಾದಿ) ಮೇಲಿನ ರಾಯಲ್ಟಿ ವಿನಾಯಿತಿಗೆ ಮತ್ತು ಯೋಜನೆಯ ನಿರ್ಮಾಣಕ್ಕೆ ಬಳಸಲಾಗುವ ಸಿಮೆಂಟ್, ಉಕ್ಕು ಮುಂತಾದ ವಸ್ತುಗಳ ಮೇಲಿನ ರಾಜ್ಯ ಭಾಗದ GST ವಿನಾಯಿತಿಗೆ ಒಪ್ಪಿಗೊಳ್ಳುವ ಬಗ್ಗೆ ಚರ್ಚಿತವಾಗಿದ್ದು, ಈ ಬಗ್ಗೆ ಪರಿಶೀಲನೆಯಲ್ಲಿದೆ. ಯೋಜನೆಯ ಜೋಡಣೆಯು ಬೆಂಗಳೂರು (ಗ್ರಾಮೀಣ) ಜಿಲ್ಲೆಯ ನೆಲಮಂಗಲ ತಾಲ್ಲೂಕು, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ತಾಲ್ಲೂಕುಗಳು, ಬೆಂಗಳೂರು (ನಗರ) ಜಿಲ್ಲೆಯ ಆನೇಕಲ್ ತಾಲ್ಲೂಕು ಮತ್ತು ಕೃಷ್ಣಗಿರಿ ಜಿಲ್ಲೆಯ ಹೊಸೂರು ಮತ್ತು ಡೆಂಕನಿಕೋಟೆ ತಾಲ್ಲೂಕುಗಳ ಮೂಲಕ ಹಾದುಹೋಗುತ್ತದೆ.<br>ಯೋಜನೆಯ ಜೋಡಣೆಯ ಉದ್ದಕ್ಕೂ ಹತ್ತಿರದ ಡಾಬಸ್‌ಪೇಟೆ, ಮಾಗಡಿ, ರಾಮನಗರ ಕನಕಪುರ, ಆನೇಕಲ್ ಮತ್ತು ಹೊಸೂರು ಪಟ್ಟಣಗಳನ್ನು ಸಂಧಿಸುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ) | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸುತ್ತಿರುವ ಈ ವರ್ತುಲ ರಸ್ತೆ ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಅಂಗಭಾಗವಾಗಿದೆಯೇ; ಹಾಗೂ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ ವಸಂತ ನರಸಾಪುರ ಕೈಗಾರಿಕೆ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವುದೇ ಮತ್ತು ವಸಂತನರಸಾಪುರ ಕೈಗಾರಿಕೆ ವಲಯದ ಮೂಲಕ ಬರುವ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಯಾವ ಹಂತ ಮತ್ತು ಜಾಗದಲ್ಲಿ ಜೋಡಣೆಯಾಗಲಿದೆ; (ಪೂರ್ಣ ಮಾಹಿತಿ ನೀಡುವುದು) | ಹೌದು, ಬೆಂಗಳೂರು ರಿಂಗ್ ರೋಡ್ (ಸ್ಯಾಟ್‌ಲೈಟ್ ಟೌನ್ ರಿಂಗ್ ರೋಡ್) ಚೆನ್ನೈ - ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಒಂದು ಭಾಗವಾಗಿದೆ. ಇದು ತುಮಕೂರು ಜಿಲ್ಲೆಯ ನರಸಾಪುರದ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ) | ತುಮಕೂರು ನಗರದ ಕೇಂದ್ರ ಭಾಗ ಹಾಗೂ ಸುಪ್ರಸಿದ್ಧ ಧಾರ್ಮಿಕ ಕೇಂದ್ರವಿರುವ ಕ್ಯಾತಸಂದ್ರದ ಮಧ್ಯಭಾಗದಲ್ಲಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿದ್ದು, ತುಮಕೂರು ನಗರಕ್ಕೆ ಪರ್ಯಾಯವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರ್ಮಿಸಲು ಉದ್ದೇಶಿಸಲಾಗಿರುವ ವರ್ತುಲ ರಸ್ತೆಯನ್ನು ಈ ಕಾರಿಡಾರ್ ಭಾಗವನ್ನಾಗಿಸುವುದು ಉತ್ತಮವಲ್ಲವೇ? (ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ತುಮಕೂರು ಬೈಪಾಸ್ ಯೋಜನೆಯನ್ನು NHAI ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ತುಮಕೂರು ರಾಷ್ಟ್ರೀಯ ಹೆದ್ದಾರಿ-48ರ ಕಿ.ಮೀ.54.980ರಲ್ಲಿ ನಂದಿಹಳ್ಳಿಯಿಂದ ಟೇಕ್ ಆಫ್ ಪಾಯಿಂಟ್ ಆಗಿದ್ದು ಮಲ್ಲಸಂದ್ರ ರಾಷ್ಟ್ರೀಯ ಹೆದ್ದಾರಿ-206ರ ಕಿ.ಮೀ.12.300 ರಲ್ಲಿ ಸಂಪರ್ಕಿಸುತ್ತದೆ ಮತ್ತು ರಾಷ್ಟ್ರೀಯ ಹೆದ್ದಾರಿ-48ರ ಕಿ.ಮೀ.88.100 ವಸಂತನರಸಾಪುರದಲ್ಲಿ ಕೊನೆಗೊಳ್ಳುತ್ತದೆ. ವಿವರವಾದ ಯೋಜನಾ ವರದಿ ಮತ್ತು ಭೂಸ್ವಾಧೀನ ಪ್ರಗತಿಯಲ್ಲಿದೆ ಮತ್ತು 80% ಭೂಸ್ವಾಧೀನ ಲಭ್ಯವಾದ ನಂತರ ಜೂನ್/ಜುಲೈ 2023ರಲ್ಲಿ ಬಿಡ್‌ಗಳನ್ನು ಆಹ್ವಾನಿಸುವ ನಿರೀಕ್ಷೆ ಇದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 39 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು